ಕಾರ್ಯಾಚರಣೆಗಳನ್ನು ಕೈಗೊಳ್ಳುತ್ತಿದ್ದರು.

ಅಂದು ಸಂಕ್ರಾಂತಿಯ ಮುಂದಿನ ದಿನ. ಬೆಳಗ್ಗೆ ಹನ್ನೊಂದು ಗಂಟೆ ಸಮಯದಲ್ಲಿ ಸುಮಾರು ಮೂವತ್ತು ವರ್ಷದ ಯುವಕನೊಬ್ಬ ಆಫೀಸಿಗೆ ನುಗ್ಗಿ ಎಸ್ಪಿ ರೆಡ್ಡಿಯ ಕೊರಳಪಟ್ಟಿ ಹಿಡಿದು ಜಗ್ಗಿ ಹೊರಕ್ಕೆ ಎಳೆಯಲು ಪ್ರಯತ್ನಿಸಿದ್ದ. ಸುತ್ತಲಿದ್ದ ಪೊಲೀಸರು ಅವನನ್ನು ಹಿಡಿದು ಕಟ್ಟಿ ಹಾಕಿದ್ದರು. ಅವನೊಬ್ಬ ನಕ್ಸಲ್ ಮಾಹಿತಿದಾರನಂತೆ. ಪಕ್ಕದ ಚೇಂಬರ್‌ನಲ್ಲಿದ್ದ ರಂಗರಾವ್ ವಿಷಯ ತಿಳಿದು ಆ ಯುವಕನನ್ನು ಕ್ಲೋಸ್ಡ್ ಜೀಪಿನಲ್ಲಿ ಕೂರಿಸಿಕೊಂಡು ಅಲ್ಲಿಂದ ಸುಮಾರು ಅರವತ್ತು ಕಿಲೋಮೀಟರ್ ದೂರದ ಜಂಗಲ್ ಪೊಲೀಸ್ ಸ್ಟೇಷನ್ನಿಗೆ ಕರೆದೊಯ್ದಿದ್ದರು.

ಆ ಯುವಕನ ಮುಖದಲ್ಲಿ ಮಂದಹಾಸದ ನಗು ಇತ್ತೇ ವಿನಹ ಒಂದಿಷ್ಟು ಭಯ ಕೂಡಾ ಕಂಡಿರಲಿಲ್ಲ. ರಂಗರಾವ್ ಆ ಯುವಕನಿಗೆ ಥರ್ಡ್ ಡಿಗ್ರಿ ಪನಿಶ್ಮೆಂಟ್ ನೀಡಲು ನಿರ್ಧರಿಸಿ ಬಾಯಿಗೆ ಬಟ್ಟೆಯನ್ನು ತುರುಕಿ, ಶಿಶ್ನದ ರಂಧ್ರದಲ್ಲಿ ತಾಮ್ರದ ತಂತಿಯನ್ನು ತೂರಿಸಿದ್ದರು. ನೋವು ತಡೆಯಲಾಗದೆ, ಕೂಗಿಕೊಳ್ಳಲೂ ಆಗದೆ ಆ ಯುವಕ ಮೂರ್ಛೆ ಹೋಗಿದ್ದ. ಕ್ಷಣ ತಾನು ಮಾಡಿದ್ದು ವಿಪರೀತವೆನಿಸಿ ರಂಗರಾವ್ ಪಶ್ಚಾತ್ತಾಪ ಪಟ್ಟುಕೊಂಡು ಆತನಿಗೆ ಒಳ್ಳೆಯ ಟ್ರೀಟ್ಮೆಂಟ್ ಕೊಡಿಸಲು ಹೇಳಿ ಹಿಂತಿರುಗಿದ್ದರು.

ಅವೊತ್ತು ರಾತ್ರಿ ಮೊದಲ ಬಾರಿಗೆ ನಿದ್ದೆ ಬಾರದೆ ಸುಮಾರು ಹೊತ್ತು ಒದ್ದಾಡಿದ್ದರು. ಆದರೂ ನಕ್ಸಲ್ ಮಾಹಿತಿದಾರನೊಬ್ಬ ಎಸ್ಪಿಯವರ ಕೊರಳಪಟ್ಟಿ ಹಿಡಿದುಕೊಳ್ಳುವುದೆಂದರೇನು? ಅದಕ್ಕೆ ಸರಿಯಾದ ಶಿಕ್ಷೆ ತಾನು ನೀಡಿದೆನೆಂದು ಸಮಾಧಾನಪಟ್ಟುಕೊಂಡಿದ್ದರು. ಮಾರನೆಯ ದಿನ ಜಂಗಲ್ ಪೊಲೀಸ್ ಸ್ಟೇಷನ್ನಿಗೆ ಹೋದಾಗ ಆ ಯುವಕ ಚೇತರಿಸಿಕೊಂಡಿದ್ದ. ಆದರೆ ರಂಗರಾವ್‌ರನ್ನು ಕಂಡು ಭಯದಿಂದ ತತ್ತರಿಸಿದ್ದ. ಆ ಯುವಕನ ಮುಖದಲ್ಲಿ ಭಯ ಕಂಡು ತಾನು ಮಾಡಿದ್ದು ಸರಿಯೆನಿಸಿತ್ತು ಆ ಕ್ಷಣ. ಅಪರಾಧ ನಿಯಂತ್ರಣಕ್ಕೆ ಭಯ ದೊಡ್ಡ ಆಯುಧವೆಂದು ನಂಬಿದ್ದರು ರಂಗರಾವ್.

ಮೂರನೆಯ ದಿನ ಬೆಳಿಗ್ಗೆ ವಿಶಾಖಪಟ್ಟಣದಿಂದ ನಕ್ಸಲರ ಪರ ಲಾಯರ್ ಚಿಲಕಲ ಪೇಟ ನರಸಿಂಹ ನಾಯ್ಡು ಬೇಲ್ ಆರ್ಡರ್ ಸಮೇತ ರಂಗರಾವ್ ಚೇಂಬರ್‌ನಲ್ಲಿ ಕುಳಿತಿದ್ದರು. ಶ್ರೀಮಂತ ಜಮೀನ್ದಾರಿ ಕುಟುಂಬದಿಂದ ಬಂದಿದ್ದ ನರಸಿಂಹ ನಾಯ್ಡು ಎರಡು ವರ್ಷಗಳ ಹಿಂದೆ ತನ್ನ ಸ್ವಂತ ಚಿಕ್ಕಪ್ಪನನ್ನೇ ಹತ್ಯೆಗೈದಿದ್ದ ನಕ್ಸಲರಿಗೆ ಬೇಲ್ ಕೊಡಿಸಿದ್ದರು! ನಲವತ್ತು ವರ್ಷ ವಯಸ್ಸಿನ ನರಸಿಂಹ ನಾಯ್ಡು ಆಫೀಸು ಬಡ ರೈತ, ಕೂಲಿ ಕಾರ್ಮಿಕರಿಂದ ತುಂಬಿ ತುಳುಕುತ್ತಿರುತ್ತದೆ. ತುಂಬಾ ಬಡವರ ಕೇಸುಗಳನ್ನು ದುಡ್ಡು ತೆಗೆದುಕೊಳ್ಳದೆ ನರಸಿಂಹ ನಾಯ್ಡು ನಡೆಸುವುದರಿಂದ 'ಬಡವರ ಲಾಯರ್' ಎಂದೇ ಜಿಲ್ಲೆಯಲ್ಲಿ ಹೆಸರು ಗಳಿಸಿದ್ದಾರೆ. ಸಿವಿಲ್ ಮತ್ತು ಕ್ರಿಮಿನಲ್ ಕಾಯ್ದೆ, ನಿಯಮಗಳನ್ನು, ಕ್ಲಾಸ್‌ಗಳನ್ನು ಮಧ್ಯರಾತ್ರಿಯಲ್ಲಿ ಬೇಕಾದರೂ ನಾಲಿಗೆ ತುದಿಯಲ್ಲಿ ನೃತ್ಯ ಮಾಡಿಸುತ್ತಾರೆ. ಎಲ್ಲಾ ಇಲಾಖೆಯ ಅಧಿಕಾರಿಗಳೂ ನರಸಿಂಹ ನಾಯ್ಡು ಕಚೇರಿ ಪ್ರವೇಶಿಸಿದರೆ ಥರಗುಟ್ಟುತ್ತಾರೆ.

'ಮಿಸ್ಟರ್ ರಂಗರಾವ್. ನೀವು ಪ್ರಾಮಾಣಿಕ ಅಧಿಕಾರಿಯೆಂದು ನಾನು ಕೇಳಿದ್ದೇನೆ. ಆದರೆ ಪ್ರಾಮಾಣಿಕತೆಯ ಜೊತೆಗೆ ಕರುಣೆಯೂ ಇರಬೇಕು. ಆಗ ಮಾತ್ರ ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯ' ಬೇಲ್ ಆರ್ಡರನ್ನು ಮುಂದಿಡುತ್ತಾ ಮಾತನಾಡಿದ್ದರು ನರಸಿಂಹ ನಾಯ್ಡು. 'ಮಿಸ್ಟರ್ ನಾಯ್ಡು. ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವುದು, ಕಾನೂನನ್ನು ಕೈಗೆತ್ತಿಕೊಳ್ಳುವುದು ಅಪರಾಧ. ಅಂಥ ಅಪರಾಧದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕಾದದ್ದು ನನ್ನ ಕರ್ತವ್ಯ. ನನ್ನ ಕರ್ತವ್ಯವನ್ನು ನಾನು ಪ್ರಾಮಾಣಿಕವಾಗಿ ಮಾಡುತ್ತಿದ್ದೇನೆ. ಹಾಗೆ ಕರ್ತವ್ಯ ನಿರ್ವಹಿಸುವಾಗ ಭಯವನ್ನು ಹುಟ್ಟಿಸುವುದು ಕೆಲವೊಮ್ಮೆ ಅನಿವಾರ್ಯವಾಗುತ್ತದೆ' ರಂಗರಾವ್ ಸಮಾಧಾನವಾಗಿಯೇ ನುಡಿದಿದ್ದರು.

'ನನಗೆ ಗೊತ್ತು ಮಿಸ್ಟರ್ ರಾವ್ ಗನ್ ರೆಪ್ರೆಸೆಂಟ್ಸ್ ಪವರ್. ನೀವು ನಿಮ್ಮ ಗನ್ನನ್ನು ಸಮಾಜದಲ್ಲಿನ ಹಸಿವು, ಅಸಮಾನತೆ, ಭ್ರಷ್ಟಾಚಾರ ಮುಂತಾದ ಸಾಮಾಜಿಕ ಅನಿಷ್ಟಗಳನ್ನು ಸಾಯಿಸಲು ಬಳಸಬೇಕು. ಅದು ಬಿಟ್ಟು ಮನುಷ್ಯರನ್ನು ಕೊಲ್ಲಲು ಬಳಸಬಾರದು. 'Kill the sin but not the sinner' ಎಂಬ ನಾಣ್ಣುಡಿಯನ್ನು ನೀವು ಕೇಳಿಲ್ಲವೇನೋ. ಅಪರಾಧವನ್ನು ಕೊಲ್ಲು, ಅಪರಾಧಿಯನ್ನು ಕೊಲ್ಲಬೇಡ ಎಂದು ಮಹಾತ್ಮ ಗಾಂಧೀಜಿ ಯಾವೊತ್ತೋ ಹೇಳಿದ್ದಾರೆ. ಆದರೆ ನಮ್ಮ ಬ್ಯುರೋಕ್ರಸಿ ಅಪರಾಧವನ್ನು ಕೊಲ್ಲುವುದರ ಬದಲಾಗಿ ಅಪರಾಧಿಗಳನ್ನು ಕೊಲ್ಲುವ ಕೆಲಸದಲ್ಲಿ